ಪಠತ ಸಂಸ್ಕೃತಂ
ವದತ ಸಂಸ್ಕೃತಂ
ಲಸತು ಸಂಸ್ಕೃತಂ ಚಿರಂ
ಗೃಹೇ ಗೃಹೇ ಚ ಪುನರಪಿ ॥

ಸಮಾಜಸ್ಯ ಹಿತಂ
ॐ
ಸಂಸ್ಕೃತೇ ನಿಹಿತಮ್

**Read Sanskrit Speak Sanskrit**
**Bring Sanskrit in Your Daily Life**

ಯಾವದಸ್ತಿ ತ್ರಯೀ ಲೋಕೇ ಚತುರ್ಮುಖ ಮುಖೋದ್ಭವಾ ।
ಯಾವದ್ವಾ ರಾಮಚರಿತಂ ವಾಲ್ಮೀಕಿ ಕವಿ ಚಿತ್ರಿತಮ್ ॥
ಕ್ಷರಂತ್ಯಮೃತಧಾರಾ ವಾ ಯಾವತ್ ವ್ಯಾಸಸ್ಯ ಸೂಕ್ತಯಃ ।
ವಾಗ್ದೇವ್ಯಾ ವರಪುತ್ರಸ್ಯ ಕಾಲಿದಾಸಸ್ಯ ವಾ ಗಿರಃ ॥
ತಾವದೇಷಾ ದೇವಭಾಷಾ ದೇವೀ ಸ್ಥಾಸ್ಯತಿ ಭೂತಲೇ ।
ಯಾವಚ್ಚ ವಂಶೋಸ್ತ್ಯಾರ್ಯಾಣಾಂ ತಾವದೇಷಾ ಧ್ರುವಂ ಧ್ರುವಾ ॥

~ ವಂದನೆಗಳು ~

ಡಾ. ಪ್ರಸನ್ನಾಕ್ಷೀ ಕೆ. ಎಲ್.          ವಿ. ಲಕ್ಷ್ಮೀಶ್

ಸಂಪಾದಕೀಯ

# ನಾವು ಅರಸುವ ಅಂತಿಮ ನೆಲೆ

ಭಗವಂತನೆಂಬುವನು ಇದ್ದಾನೆಯೆ, ಇಲ್ಲವೆ? ಇದ್ದರೆ ಅವನೆಂತಹ ವ್ಯಕ್ತಿ? ಅವನು ವ್ಯಕ್ತಿ ಹೌದೇ, ಅಲ್ಲವೆ? ಅಥವಾ ಇನ್ನೇನಾದರೂ ಆಗಿರುವನೆ? ಅವನ ನಿಜವಾದ ಸ್ವರೂಪ ಏನು? – ಈ ಪ್ರಶ್ನೆಗಳು ಇಂದು ನಿನ್ನೆಯವಲ್ಲ. ಸಹಸ್ರಾರು ವರ್ಷಗಳ ಹಿಂದೆಯೇ ಈ ಪ್ರಶ್ನೆಗಳು ಹುಟ್ಟಿವೆ; ಅವುಗಳಿಗೆ ಉತ್ತರವನ್ನೂ ಕಂಡಿದ್ದಾರೆ. ಆದರೆ ಶತಮಾನಗಳ ನಂತರವೂ, ಈ ದಿನದವರೆಗೂ ದೇವರನ್ನು ಕುರಿತ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದುವೇಕೆ? ದೇವರಿದ್ದಾನೆ ಎಂದಾಗಲಿ, ಇಲ್ಲ ಎಂದಾಗಲಿ ಇತ್ಯರ್ಥವಾಗದೆ, ನಿರಂತರ ಚರ್ಚೆಯ, ಅನ್ವೇಷಣೆಯ, ಹಲವು ಬಗೆಯ ಸಂಘರ್ಷಗಳ ವಿಷಯವಾದವೇಕೆ?

ಸ್ವಲ್ಪ ಆಲೋಚಿಸಿದರೂ ನಮಗರ್ಥವಾಗುವುದು, ಇತರ ಯಾವುದೇ ವಿಷಯಗಳಂತೆ ಕೆಲವೊಂದು ವಿಚಾರ, ಮಂಥನ, ಪರೀಕ್ಷೆಗಳಿಂದ ಮಾತ್ರ ಇತ್ಯರ್ಥವಾಗಬಹುದಾದ ಸುಲಭ ಸಂಗತಿ ಇದಲ್ಲ ಎಂದು. ಭಗವಂತನ ಅಸ್ತಿತ್ವದ ಪ್ರಶ್ನೆ ಕೇವಲ ಭೌತಿಕ ಜಗತ್ತನ್ನಷ್ಟೇ ಒಳಗೊಂಡದ್ದಲ್ಲ; ನಮ್ಮ ಇಡೀ ಅಸ್ತಿತ್ವವನ್ನೇ ಅದು ಒಳಗೊಂಡಿದೆ. ನಮ್ಮ ತಿಳುವಳಿಕೆ ಅಥವಾ ಗ್ರಹಿಕೆಯ ಸಾಮರ್ಥ್ಯವನ್ನೇ ಅದು ಪ್ರಶ್ನಿಸುತ್ತದೆ. ಅನುಭವ ಮತ್ತು ತತ್ತ್ವ – ಈ ಎರಡು ಸಂಗತಿಗಳು ಧರ್ಮದ ತಿರುಳಾಗಿವೆ. ಇವುಗಳನ್ನು ಆಧರಿಸಿ ನಿಂತ ಆಧ್ಯಾತ್ಮಿಕ ಸತ್ಯಗಳು ಧರ್ಮದ ಸ್ವರೂಪವನ್ನು ನಿರ್ಧರಿಸುತ್ತವೆ. ಆದ್ದರಿಂದ ಭಗವದ್ ಸ್ವರೂಪದ ಬಗ್ಗೆ ನಡೆಸುವ ಚಿಂತನೆಗಳು ಆಧ್ಯಾತ್ಮಿಕ ಅನುಭವವನ್ನೂ, ದಾರ್ಶನಿಕ ತತ್ತ್ವಗಳನ್ನೂ ಸೂಕ್ಷ್ಮವಾಗಿ ಗಮನಿಸಬೇಕು.

### ದೇವರು : ವ್ಯಕ್ತಿರೂಪ ಮತ್ತು ತತ್ತ್ವರೂಪ

"ನಮ್ಮ ಜ್ಞಾನವೆಲ್ಲ ಅನುಭವವನ್ನು ಆಧರಿಸಿದೆ" ಎಂದು ಸ್ವಾಮಿ ವಿವೇಕಾನಂದರು 'ರಾಜಯೋಗ' ಗ್ರಂಥದ ಆರಂಭದಲ್ಲಿ ಹೇಳುತ್ತಾರೆ. ಎಲ್ಲ ಧರ್ಮ, ಸಿದ್ಧಾಂತ, ಪಂಥಗಳ ಮೂಲವೂ ಅನುಭವ; ಅದು ಕೇವಲ ಹಿಂದೆ ಯಾರೋ ಪಡೆದ ಅನುಭವವಷ್ಟೇ ಅಲ್ಲ, ಇಂದಿಗೂ, ಎಂದೆಂದಿಗೂ ಪಡೆದುಕೊಳ್ಳಬಹುದಾದ ಅನುಭವವೆಂದೂ ಅವರು ಸ್ಪಷ್ಟಪಡಿಸುತ್ತಾರೆ. ಧರ್ಮಗಳೆಲ್ಲ ಇಂಥ ಅನುಭವಗಳ ಆಧಾರದಲ್ಲಿ ನಿರ್ಮಿತವಾಗಿವೆ, ಈ ಅನುಭವಗಳನ್ನು ಪಡೆದ ವ್ಯಕ್ತಿಗಳನ್ನು ಆಧರಿಸಿ ನಿರ್ಮಿತವಾಗಿವೆ. ಆದ್ದರಿಂದ ಆಧ್ಯಾತ್ಮಿಕ ಅನುಭವಗಳು ಧರ್ಮದ ಸಮಸ್ತ ಅಂಗಗಳನ್ನೂ ನಿರ್ಣಯಿಸುವ ಪ್ರಧಾನ ಸಂಗತಿಯಾಗಿವೆ. ವ್ಯಕ್ತಿಯಿಂದ ಅನುಭವ ಬೇರೆಯಲ್ಲ; ಆದರೆ ಕಾಲಕ್ರಮದಲ್ಲಿ ವ್ಯಕ್ತಿಯ ವೈಯಕ್ತಿಕ ವಿಚಾರಗಳು ಮರೆಯಾಗಿ ತತ್ತ್ವವೊಂದೇ (ಅಥವಾ ಅವನ ಅನುಭವವೊಂದೇ) ಉಳಿಯುತ್ತದೆ. ಈ ಹಿನ್ನೆಲೆಯಲ್ಲಿ ಭಗವಂತನ ಸ್ವರೂಪವನ್ನು ವ್ಯಕ್ತಿರೂಪ ಹಾಗೂ ತತ್ತ್ವರೂಪ ಎಂದು ಎರಡು ವಿಧವಾಗಿ ಕಂಡಿರುವುದನ್ನು ಗಮನಿಸಬಹುದು.

### ೧. ವೈದಿಕ ಹಿನ್ನೆಲೆ

ಅನ್ವೇಷಣೆಯ ವಿವಿಧ ಹಂತಗಳಲ್ಲಿ ಸಾಧಕ, ಋಷಿ ಅಥವಾ ಯೋಗಿಗಳು ಕಂಡುಕೊಂಡ ದಿವ್ಯ ಅನುಭವಗಳು ವ್ಯಕ್ತಿ ಅಥವಾ ತತ್ತ್ವ ಈ ಎರಡೂ ರೂಪಗಳಲ್ಲಿ ಇದ್ದಿರಬೇಕು. ನಮಗೆ ಲಭ್ಯವಿರುವ ಅತಿ ಪ್ರಾಚೀನ ಸಾಹಿತ್ಯವಾದ ವೇದಗಳಲ್ಲಿ ಇದರ ಕುರುಹುಗಳಿವೆ. ಋಗ್ವೇದದ ಮಂತ್ರಗಳಲ್ಲಿ ಬರುವ ಇಂದ್ರ, ವರುಣ, ರುದ್ರ, ಪೂಷನ್, ವಿಶ್ವೇದೇವತೆಗಳು ಅಲ್ಲಿನ ವಿವರಣೆಗಳಿಂದ ಕಂಡುಬರುವಂತೆ ವ್ಯಕ್ತಿರೂಪವನ್ನು ಹೊಂದಿದ್ದರೂ, ಅವೆಲ್ಲ ಒಂದು ವಿಶ್ವನಿಯಮಕ್ಕೆ ಅಥವಾ ಆಧ್ಯಾತ್ಮಿಕ ನೆಲೆಯ ತತ್ತ್ವಕ್ಕೆ ಬದ್ಧವಾಗಿರುವಂತೆ ಕಂಡುಬರುತ್ತದೆ. ಉಪನಿಷತ್ತುಗಳ ಕಾಲಕ್ಕೆ ಸ್ಪಷ್ಟವಾದ ದಾರ್ಶನಿಕ ತತ್ತ್ವಗಳು ರೂಪುಗೊಂಡಿದ್ದು, ಅವು ಅನುಭೂತಿಯ ಅಂತಿಮ ಸ್ತರವನ್ನು ತಲುಪುತ್ತವೆ. ಹೀಗೆ ವ್ಯಕ್ತಿರೂಪದ ದೇವರಿಂದ ಆರಂಭಗೊಂಡ ವೈದಿಕ ಪರಂಪರೆ ತತ್ತ್ವರೂಪದ ದೇವರ ನೆಲೆಯನ್ನು ಕಂಡುಕೊಳ್ಳುತ್ತದೆ.

ವೇದ ಹಾಗೂ ಉಪನಿಷತ್ತುಗಳ ಈ ಅನುಭವ ಸತ್ಯಗಳು ಮುಂದೆ ವೈವಿಧ್ಯಮಯವಾಗಿ ವಿಕಾಸಗೊಂಡಿದ್ದನ್ನು ಕಾಣುತ್ತೇವೆ. ಸ್ವತಂತ್ರ ಅನ್ವೇಷಣೆಯ ಮೂಲಕ ಪರಮ ಸತ್ಯವನ್ನು ಕಂಡುಕೊಂಡ ಬುದ್ಧನಂಥವರು ಒಂದು ಕಡೆ; ಗುರುಮುಖೇನ ಪರಂಪರೆಯನ್ನು ಅವಲಂಬಿಸಿ, ಆಧ್ಯಾತ್ಮಿಕ ಸಾಧನೆಯ ಮಾರ್ಗದಿಂದ ಸಾಕ್ಷಾತ್ಕಾರ ಪಡೆದ ಸಾಧಕರ ಜೀವನ ಇನ್ನೊಂದು ಕಡೆ. ಇಲ್ಲಿ ತತ್ತ್ವಾವಲಂಬಿಯಾದ ಅನ್ವೇಷಣೆಯೂ ಇದೆ; ಆರಾಧನೆಯ ಮೂಲಕ ವ್ಯಕ್ತಿರೂಪದ ಭಗವಂತನನ್ನರಸುವ ಭಕ್ತಿಮಾರ್ಗವೂ ಇದೆ. ಇದಕ್ಕೆ ಪುಷ್ಟಿ ನೀಡುವಂತೆ ಭಗವಂತನ ಆವಿರ್ಭಾವವೆಂದೇ ಹೇಳಬಹುದಾದ ಅವತಾರಪುರುಷರು ಒಂದೆಡೆ ತತ್ತ್ವವನ್ನೂ, ಇನ್ನೊಂದೆಡೆ ದೇವದೇವತೆಗಳ ಅಸ್ತಿತ್ವವನ್ನೂ ತಮ್ಮ ಅಸಾಧಾರಣ ಜೀವನದ ಮೂಲಕ ದೃಢೀಕರಿಸಿದರು. ಹೀಗೆ ನಮ್ಮಲ್ಲಿ ದೇವರ ಅಸ್ತಿತ್ವವನ್ನು ಪ್ರಶ್ನಿಸುವವರಿಗೆ ಸೂಕ್ತ ಉತ್ತರ ದೊರೆಯಬಹುದಾದ ತತ್ತ್ವಜಿಜ್ಞಾಸೆಗಳು ದೊರಕಿದವು; ತಮ್ಮ ನಂಬುಗೆಯ ಬಲದಿಂದ ವ್ಯಕ್ತಿರೂಪದ ಭಗವಂತನನ್ನು ಕಂಡುಕೊಳ್ಳಬಯಸುವ ಸಾಧಕರಿಗೆ ದಾರಿ ತೋರಿಸಬಲ್ಲ ಭಕ್ತಿಪರಂಪರೆಯೂ ಬೆಳೆದುಬಂತು. ಆದರೆ, ಹೇಗೆ ತತ್ತ್ವ – ದರ್ಶನಗಳ ವೈಚಾರಿಕ ಅನ್ವೇಷಣೆಯೊಂದಿಗೆ ಉಪಾಸನೆಯ ಮಹತ್ವ ಹಾಸುಹೊಕ್ಕಾಗಿ ಬೆಳೆದು

ಬಂತೋ, ಅದೇ ರೀತಿ ಭಕ್ತಿಪರಂಪರೆಯ ಮಹಾಪುರುಷರಲ್ಲಿ ತಾತ್ತ್ವಿಕ ನೆಲೆಯ ಸಮರ್ಥನೆ ಅತಿಮುಖ್ಯವೆಂಬ ಅಂಶವೂ ಕಂಡು ಬಂತು. ನಮ್ಮ ಪರಂಪರೆಯಲ್ಲಿ ಜ್ಞಾನ–ಭಕ್ತಿಗಳೆರಡೂ ಒಂದಕ್ಕೊಂದು ಪೂರಕ ಹಾಗೂ ಅವೆರಡೂ ಬೆಳವಣಿಗೆಗೆ ಅನಿವಾರ್ಯವೆಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ.

### ೨. ಪೌರಾಣಿಕ ಹಿನ್ನೆಲೆ

ಪುರಾಣಗಳು ದೇವದೇವತೆಗಳ ಚರಿತ್ರೆಯನ್ನು ಆಧರಿಸಿ ಬೆಳೆದುಬಂದ ಕಥಾಪರಂಪರೆ. ಇಲ್ಲಿ ನಿರೂಪಣೆ, ಜಿಜ್ಞಾಸೆಗಳಿದ್ದರೂ ಅವು ಗೌಣ; ದೈವೀಪುರುಷನ ಮಹಿಮೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಮಾತ್ರ ಅವು ಅಲ್ಲಿ ಬಂದಿರುತ್ತವೆ. ಶ್ರೀಕೃಷ್ಣ, ಶಿವ, ದೇವಿ ಮೊದಲಾದ ದೇವತೆಗಳ ದಿವ್ಯಕಥೆಗಳು ಜನಸಾಮಾನ್ಯರ ಮನಸ್ಸಿನಲ್ಲಿ ಭಕ್ತಿ, ತ್ಯಾಗ, ವೈರಾಗ್ಯಗಳನ್ನು ಮೊಳೆಸಿ, ಅವರ ಮನಸ್ಸು ಭಗವಂತನ ಕಡೆಗೆ ಹರಿಯಬೇಕೆಂಬುದೇ ಈ ಪುರಾಣಗಳ ಉದ್ದೇಶ. ಅವು ಜನರ ಸಮಷ್ಟಿ ಮನಸ್ಸಿನಲ್ಲಿ ಹಾಗೂ ಪ್ರಜ್ಞೆಯ ಆಂತರಿಕ ಪದರಗಳಲ್ಲಿ ದೇವದೇವತೆಗಳ ವ್ಯಕ್ತಿರೂಪವನ್ನು ನಿರ್ಮಿಸಿ, ಆ ದಿವ್ಯಪ್ರಭೆ ಸುಪ್ತವಾಗಿ ಕೆಲಸಮಾಡುವಂತೆ ಪ್ರೇರೇಪಿಸಿದವು. ಇತಿಹಾಸಗಳೆಂದು ಕರೆಯಲಾಗುವ ರಾಮಾಯಣ, ಮಹಾಭಾರತಗಳೂ ಈ ಪುರಾಣಗಳ ರೀತಿಯಲ್ಲೇ ಕೆಲಸ ಮಾಡುತ್ತವೆ. ಅವು ಇತಿಹಾಸದ ಸ್ವರೂಪವನ್ನು ಕಳಚಿಕೊಂಡು, ಧಾರ್ಮಿಕ ಪರಿವೇಷವನ್ನು ಪಡೆದಿರುವುದಕ್ಕೆ ಸೂಚನೆಯೇ ಅವುಗಳಲ್ಲಿ ಅಡಕವಾಗಿರುವ ಭಗವದ್ಗೀತೆ, ವಿಷ್ಣುಸಹಸ್ರನಾಮ ಮೊದಲಾದ ಅನುಷ್ಠಾನಪರವಾದ ಕೃತಿಗಳು. ಪುರಾಣಪುರುಷರು ಐತಿಹಾಸಿಕ ವ್ಯಕ್ತಿಗಳಿರಲಿ ಇಲ್ಲದಿರಲಿ, ಜನಸಾಮಾನ್ಯರ ಪಾಲಿಗೆ ಅವರು ಸಾಕ್ಷಾತ್ ಭಗವಂತನ ಪ್ರತಿರೂಪವೇ ಆಗಿ ಪರಿಣಮಿಸಿರುವುದು ಸ್ಪಷ್ಟವಾಗಿದೆ.

ಪೌರಾಣಿಕ ಹಿನ್ನೆಲೆಯ ದೈವೀರೂಪಗಳಲ್ಲಿ ಕಂಡುಬರುವ ಒಂದು ವಿಶೇಷ ಅಂಶವೆಂದರೆ, 'ಆಧ್ಯಾತ್ಮಿಕ ಜಗತ್ತಿನ ಅಂತಿಮ ಸತ್ಯ ಎನ್ನುವುದೊಂದು ಇದ್ದರೆ, ಅದು ಈ ದೇವನೇ ಆಗಿದ್ದಾನೆ' ಎಂಬ ವಿವರಣೆ ಎಲ್ಲೆಡೆ ಕಂಡುಬರುತ್ತದೆ. ಎಲ್ಲ ದೇವದೇವತೆಗಳೂ ಅವನಲ್ಲೇ ಅಡಕವಾಗುತ್ತವೆ, ಎಲ್ಲ ತತ್ತ್ವಗಳೂ ಅವನನ್ನೇ ಕುರಿತಾಗಿವೆ; ಎಲ್ಲ ಸಾಧಕರ ಗಮ್ಯವೂ ಅವನೇ – ಈ ಪರಿಕಲ್ಪನೆಯ ಸುತ್ತ ಎಲ್ಲ ಇತಿಹಾಸ, ಪುರಾಣಗಳು ತಮ್ಮ ಕಥಾನಕವನ್ನು ಬೆಳೆಸುತ್ತವೆ. 'ಅಗೋಚರ, ಅಗಮ್ಯ ತತ್ತ್ವವು ಈ ವಿಶೇಷ ವ್ಯಕ್ತಿಯ ಮೂಲಕ ಆವಿರ್ಭವಿಸಿದೆ; ಅವನ ಸಹಾಯದಿಂದ ಅಥವಾ ಕೃಪೆಯ ಬಲದಿಂದ ಸಾಮಾನ್ಯ ಮಾನವನೂ ಮುಕ್ತಿಯ ದಡವನ್ನು ದಾಟಬಹುದು' ಎಂಬ ಆಶಯ ಇಲ್ಲಿ ವ್ಯಕ್ತವಾಗುತ್ತದೆ. ಇದಕ್ಕನುಗುಣವಾಗಿ, ಭಕ್ತಿಪಂಥದ ಸಾಧುಸಂತರ ಪರಂಪರೆಯೂ ಈ ವಿಧಾನ ಅತ್ಯಂತ ಸಮರ್ಥವಾದ ಒಂದು ಸಾಧನಾಮಾರ್ಗವೆಂಬುದನ್ನು ಸಮರ್ಥಿಸುತ್ತಾ, ಅದನ್ನೇ ಸಾರ್ವತ್ರಿಕವಾಗಿ ಬೋಧಿಸುತ್ತದೆ.

### ೩. ಚಾರಿತ್ರಿಕ ಹಿನ್ನಲೆ

ವೈಜ್ಞಾನಿಕ ಮನೋಭಾವ ವ್ಯಾಪಕಗೊಂಡಂತೆಲ್ಲ ಪ್ರತಿಯೊಂದನ್ನೂ ಚಾರಿತ್ರಿಕ ದೃಷ್ಟಿಕೋನಕ್ಕೆ ಅಳವಡಿಸುವ ಪ್ರವೃತ್ತಿ ಬೆಳೆದುಬಂದುದು ನಿಜ. ಆಧುನಿಕ ವಿದ್ಯಾಭ್ಯಾಸ ನಮ್ಮಲ್ಲಿ ಬೆಳೆದುಬಂದ ನಂತರ, 'ನೀವು ಹೇಳುವ ಕೃಷ್ಣ, ರಾಮ, ಮುಂತಾದವರ ವಿಚಾರವೆಲ್ಲ ಬರೀ ಕಟ್ಟುಕತೆ. ಅವುಗಳಿಗೆ ಚಾರಿತ್ರಿಕ ಆಧಾರಗಳಿಲ್ಲ; ಆದ್ದರಿಂದ ಅವರ ಉನ್ನತ ವ್ಯಕ್ತಿತ್ವ, ಜೀವನ, ಸಾಧನೆ ಇವುಗಳನ್ನೆಲ್ಲ ನಾವು ನಿಜವೆಂದೇ ನಂಬಬೇಕಾಗಿಲ್ಲ. ಒಂದು ವೇಳೆ ಅವರು ನಿಜವಾಗಿಯೂ ಇದ್ದಿರುತ್ತಿದ್ದರೆ ಜಗತ್ತು ಇಷ್ಟೊಂದು ಕೆಟ್ಟದಾಗಿ ಇರುತ್ತಿರಲಿಲ್ಲ' ಎಂಬ ಮಾತುಗಳು ಸರ್ವೇಸಾಮಾನ್ಯವಾಗಿದೆ. ಜನಜೀವನದಲ್ಲಿ ಇಂಥ ಪ್ರವೃತ್ತಿ ಗಾಢವಾದ ಪ್ರಭಾವವನ್ನು ಬೀರಿದೆ. ನಿರೀಶ್ವರವಾದ, ನಾಸ್ತಿಕತೆಗಳೂ ಇಂಥ ಪ್ರವೃತ್ತಿಯನ್ನು ಬಲಪಡಿಸುತ್ತವೆ. ಭಗವಂತನ ಆರಾಧನೆ, ಆಧ್ಯಾತ್ಮಿಕ ಸಾಧನೆ ಅಸಂಖ್ಯ ರೀತಿಯಲ್ಲಿ ನಡೆಯುತ್ತಿರುವ ನಮ್ಮ ದೇಶದಲ್ಲಿ ಎಲ್ಲ ದೇವತಾಮೂರ್ತಿಗಳಿಗೂ ಐತಿಹಾಸಿಕ ಹಿನ್ನೆಲೆಯನ್ನು ಒದಗಿಸುವುದು (ಆಧುನಿಕ ಚಾರಿತ್ರಿಕ ದೃಷ್ಟಿಕೋನದ ರೀತಿ) ಅಸಾಧ್ಯ. ಆದರೆ ಈ ಎಲ್ಲ ಧಾರ್ಮಿಕ ನಂಬಿಕೆಗಳೂ ಇತಿಹಾಸವನ್ನೇ ಅವಲಂಬಿಸಬೇಕಿಲ್ಲ ಎನ್ನುವುದು ಅತ್ಯಂತ ಗಮನಾರ್ಹವಾದ ವಿಚಾರ. ಸ್ವಾಮಿ ವಿವೇಕಾನಂದರು ಒಂದು ದಿನ ಶ್ರೀರಾಮಕೃಷ್ಣರ ಮುಂದೆ ಕೃಷ್ಣ–ರಾಧೆಯರ ವೃಂದಾವನಲೀಲೆಯ ಐತಿಹಾಸಿಕತೆಯನ್ನು ಕುರಿತು ಆಕ್ಷೇಪಣೆಯೆತ್ತಿ, ಅದು ಸುಳ್ಳೆಂದು ವಾದಿಸತೊಡಗಿದರು. ಅದಕ್ಕೆ ಶ್ರೀರಾಮಕೃಷ್ಣರು, "ಸರಿ, ರಾಧೆ ಎಂಬವಳು ಎಂದಿಗೂ ಇರಲಿಲ್ಲವೆಂದು ಹೇಳೋಣ, ಯಾರೋ ಪ್ರೇಮಿ ಸಾಧಕನೊಬ್ಬ ರಾಧೆಯ ಕಥೆಯನ್ನು ಕಲ್ಪಿಸಿದನೆನ್ನೋಣ. ಆದರೆ ಆ ಕಥೆಯನ್ನು ಕಲ್ಪಿಸುವಾಗ ಆ ಸಾಧಕನು ಶ್ರೀರಾಧೆಯ ಭಾವದಲ್ಲಿ ಪೂರ್ಣವಾಗಿ ತನ್ಮಯನಾಗಿದ್ದ ಎಂಬುದನ್ನು ನೀನು ಒಪ್ಪಲೇಬೇಕಲ್ಲವೆ? ಅಂದರೆ, ಆ ಸಾಧಕನೇ ಆಗ ತನ್ನನ್ನು ಮರೆತು ಶ್ರೀರಾಧೆಯಾಗಿದ್ದ; ವೃಂದಾವನಲೀಲೆಯ ಅಭಿನಯವೂ ಅದೇ ರೀತಿ ಸ್ಥೂಲಭಾವದಲ್ಲಿ ಕೂಡ ಆಗಿತ್ತೆಂಬುದು ಸಿದ್ಧವಾಗುತ್ತದೆ" ಎಂದಿದ್ದರು. ಇತಿಹಾಸದ ದೃಷ್ಟಿಯಿಂದ ನಿರ್ಣಯಿಸುವ ಸತ್ಯಾಸತ್ಯತೆ ಲೌಕಿಕ ದೃಷ್ಟಿಯಿಂದ ಮುಖ್ಯವಾಗಿರಬಹುದು. ಆದರೆ ಆಧ್ಯಾತ್ಮಿಕವಾಗಿ ಸಾಧಕನು ಭೌತಿಕ ಜಗತ್ತು, ಐತಿಹಾಸಿಕತೆ, ಇಂದ್ರಿಯಗ್ರಹಿಕೆ ಇವನ್ನು ಮೀರಿ ಹೋಗಬೇಕಾಗುವುದು. ಅಲ್ಲಿ ಅವನಿಗೆ ತನ್ನ ತತ್ತ್ವ ಮತ್ತು ತನ್ನ ಅತ್ಯುನ್ನತ ಆದರ್ಶ ಇವು ಮಾತ್ರವೇ ಸತ್ಯವಾಗಿರುವುದು.

ಇಷ್ಟಿದ್ದರೂ, ಐತಿಹಾಸಿಕ ದೃಷ್ಟಿಕೋನದ ಮಹತ್ವವನ್ನು ನಾವು ಅಲ್ಲಗಳೆಯುವಂತಿಲ್ಲ. ಬುದ್ಧ, ಶಂಕರ, ಚೈತನ್ಯ, ಗುರುನಾನಕ್ ಮೊದಲಾದವರೂ, ಶ್ರೀರಾಮಕೃಷ್ಣ–ವಿವೇಕಾನಂದ ಮೊದಲಾದ ಆಧುನಿಕ ಯುಗದ ಮಹಾಪುರುಷರೂ ಐತಿಹಾಸಿಕ ವ್ಯಕ್ತಿಗಳೇ; ಅವರ ಜೀವನ, ವ್ಯಕ್ತಿತ್ವ, ಸಾಧನೆ ಇವನ್ನು ಐತಿಹಾಸಿಕವಾಗಿ ಪ್ರಶ್ನಿಸುವಂತಿಲ್ಲ. ಸ್ಥೂಲದೃಷ್ಟಿಗೆ ಗೋಚರವಲ್ಲದ ಸತ್ಯಗಳನ್ನು ಪ್ರಮಾಣೀಕರಿಸಲು ಈ ಮಹಾಪುರುಷರ ಜೀವನ ಅತ್ಯಂತ ಸಮರ್ಥವಾದ ಕುರುಹಾಗಿ ಮಾರ್ಪಡುವುದು. ಆಧುನಿಕ ವೈಜ್ಞಾನಿಕ ಮನೋಭಾವದವರಿಗೂ ಸೂಕ್ತ ಉತ್ತರ ನೀಡಬಲ್ಲ